**ಜೆಎಸ್‌ಎಸ್ ಮಹಾವಿದ್ಯಾಪೀಠ**
**ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು**

ಸಹಯೋಗ

**ಮೈಸೂರು ಬಸವ ಬಳಗ ಟ್ರಸ್ಟ್**
**ಪೂರ್ವ ವಲಯ, ಮೈಸೂರು**

# ಶಿವಾನುಭವ ದಾಸೋಹ–331

**29 ನವೆಂಬರ್ 2025 * ಶನಿವಾರ * ಸಂಜೆ 6.00**

**2ನೇ 80 ಅಡಿ ರಸ್ತೆ, ಇಡ್ಲಿ ಕಟ್ಟೆ ಹತ್ತಿರ**
**ಸರದಾರ್ ವಲ್ಲಭಾಯಿ ಪಟೇಲ್ ನಗರ, ಮೈಸೂರು**

---

**ದಿವ್ಯಾಶೀರ್ವಾದ**
**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

**ಅಧ್ಯಕ್ಷತೆ**
**ಶ್ರೀ ಹೆಚ್.ಪಿ. ದೇವಪ್ಪ**
ಆರಕ್ಷಕ ಉಪನಿರೀಕ್ಷಕರು (ನಿ.), ಮೈಸೂರು

**ಉಪನ್ಯಾಸ**
**ಶ್ರೀ ಪ್ರಭುಸ್ವಾಮಿ ಚ. ಮಳಿಮಠ**
ಹಿರಿಯ ಉದ್ಘೋಷಕರು (ನಿ.), ಮೈಸೂರು

**ವಿಷಯ : ವಚನಕಾರರ ದೃಷ್ಟಿಯಲ್ಲಿ ಮಾಯೆ**

**ಭಜನೆ : ಶ್ರೀ ಶಿವರಾತ್ರೀಶ್ವರ ಭಜನಾ ತಂಡ**
**ಮತ್ತು ಶ್ರೀ ಲಲಿತಾದ್ರಿ ಮಹಿಳಾ ವೇದಿಕೆ**

**ತಮಗೆಲ್ಲ ಆದರದ ಸ್ವಾಗತ**

ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸದಸ್ಯರುಗಳು, ಮೈಸೂರು ಬಸವ ಬಳಗ ಟ್ರಸ್ಟ್

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪ್ರಸಾದನಿಲಯಗಳು ಹಾಗೂ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜನತೆಯ ಸರ್ವಾಂಗೀಣ ಉನ್ನತಿಗೆ ಕಾರಣರಾದರು. ಶಿಕ್ಷಣದ ಮೂಲಕ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಮನಗಂಡಿದ್ದರು. ಶ್ರೀಗಳವರು ಜಾತಿ, ಮತ, ಪಂಥ, ಧರ್ಮ ಭೇದವಿಲ್ಲದೆ ಅನ್ನದಾಸೋಹ, ಜ್ಞಾನದಾಸೋಹದ ಜೊತೆಗೆ ಜನತೆಯ ಸಮಗ್ರ ಅಭಿವೃದ್ಧಿಗಾಗಿ, ನೈತಿಕತೆ ಹಾಗೂ ಧಾರ್ಮಿಕತೆಗಳ ಪ್ರಸಾರಕ್ಕಾಗಿ, ಹಲವಾರು ದಶಕಗಳ ಹಿಂದೆಯೇ ಶರಣತತ್ತ್ವ ಪ್ರಸಾರ ಸಮಿತಿಯಂಥ ಸಂಸ್ಥೆಗಳ ಮೂಲಕ ಧರ್ಮ ದಾಸೋಹವನ್ನು ಪ್ರಾರಂಭಿಸಿದರು. 1986ರಲ್ಲಿ ಶರಣ ಸಾಹಿತ್ಯ ಪರಿಷತ್ತು ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಸ್ಥಾಪಿಸಿ ಆಧ್ಯಾತ್ಮಿಕ ಚಿಂತನೆಗೆ ಹೊಸ ಆಯಾಮವನ್ನು ನೀಡಿದರು.

ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 12.5.1996ರಂದು 'ಶಿವಾನುಭವ ದಾಸೋಹ' ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಅಂದಿನಿಂದಲೂ ಪ್ರತಿ ತಿಂಗಳ ಕೊನೆಯ ಶನಿವಾರದಂದು ಈ ಕಾರ್ಯಕ್ರಮವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಧರ್ಮ, ದರ್ಶನ, ವಚನಸಾಹಿತ್ಯ, ಧರ್ಮಗಳ ತೌಲನಿಕ ವಿವೇಚನೆ, ಜೀವನಕಲೆ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತಿದೆ.

**ಶ್ರೀ ಹೆಚ್.ಪಿ. ದೇವಪ್ಪನವರು** ಚಾಮರಾಜನಗರ ಜಿಲ್ಲೆಯ ಹೊರೆಯಾಲದವರು. ನಿವೃತ್ತ ಆರಕ್ಷಕ ಉಪನಿರೀಕ್ಷಕರು. 38 ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿ ನಿಸ್ಪೃಹ ಸೇವೆ ಸಲ್ಲಿಸಿರುತ್ತಾರೆ. ಆಲನಹಳ್ಳಿ ಶ್ರೀ ವೀರಶೈವ ಲಿಂಗಾಯತ ಸಮಾನ ಮನಸ್ಕರ ಸ್ನೇಹ ಬಳಗದ ಸಂಘಟನಾ ಕಾರ್ಯದರ್ಶಿಗಳಾಗಿ ಹಾಗೂ ಮೈಸೂರು ಪೂರ್ವ ವಲಯ ಬಸವ ಬಳಗ ಟ್ರಸ್ಟ್‌ನ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಶ್ರೀ ಪ್ರಭುಸ್ವಾಮಿ ಚ. ಮಳಿಮಠರವರು** ಬಿಎ, ಎಲ್‌ಎಲ್‌ಬಿ., ಪದವೀಧರರು. ಹೊಸಪೇಟೆ ಆಕಾಶವಾಣಿಯಲ್ಲಿ 1991ರಲ್ಲಿ ಉದ್ಘೋಷಕರಾಗಿ ಸೇವೆ ಆರಂಭಿಸಿ ಅನಂತರ ಧಾರವಾಡ, ಮೈಸೂರು ಕೇಂದ್ರಗಳಲ್ಲಿ 34 ವರ್ಷಗಳ ಸೇವೆ ಸಲ್ಲಿಸಿ ಹಿರಿಯ ಉದ್ಘೋಷಕರಾಗಿ ನಿವೃತ್ತರಾಗಿದ್ದಾರೆ. 'ಎ' ಶ್ರೇಣಿ ಕಲಾವಿದರಾಗಿರುವ ಇವರು ನಟನೆ, ನಿರ್ದೇಶನಗಳಲ್ಲಿ ಪರಿಣತರು. ಮಕ್ಕಳಿಗಾಗಿ ಮತ್ತು ಯುವಜನರಿಗಾಗಿ 35ಕ್ಕೂ ಹೆಚ್ಚು ರಂಗಶಿಬಿರಗಳನ್ನು ಏರ್ಪಡಿಸಿರುವ ಹೆಗ್ಗಳಿಕೆ ಇವರದು. ಬಾನುಲಿ ನಾಟಕ, ರೂಪಕ, ಪ್ರಹಸನ ಇವುಗಳಲ್ಲಿ ಏಳು ವರ್ಷಗಳ ಕಾಲ ಸತತವಾಗಿ ಪ್ರಶಸ್ತಿಗೆ ಭಾಜನರು. ಸಾಕ್ಷ್ಯಚಿತ್ರಗಳು ಮತ್ತು ಸಿನಿಮಾಗಳಲ್ಲಿಯೂ ಅಭಿನಯಿಸಿರುವ ಪ್ರತಿಭಾನ್ವಿತರು. ರಾಷ್ಟ್ರಮಟ್ಟದ ಆಕಾಶವಾಣಿ ಪುರಸ್ಕಾರ ಸ್ಪರ್ಧೆಯಲ್ಲಿ ಎರಡು ಬಾರಿ ಪ್ರಶಸ್ತಿ ಪಡೆದಿದ್ದಾರೆ. ಸರಳ ಸಜ್ಜನಿಕೆಯ, ಗ್ರಾಮೀಣ ಸೊಗಡಿನ, ಅಪರೂಪ ವ್ಯಕ್ತಿತ್ವದ ಉತ್ಸಾಹಿಗಳು.

**ಮೈಸೂರು ಬಸವ ಬಳಗ ಟ್ರಸ್ಟ್** (ಪೂರ್ವ ವಲಯ) ಸುಮಾರು 25 ಬಡಾವಣೆಗಳನ್ನು ಒಳಗೊಂಡ ಸಮಿತಿಯಾಗಿದೆ. 1 ಜೂನ್ 2025ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟನೆಯಾಯಿತು. 30 ಜನ ಪದಾಧಿಕಾರಿಗಳನ್ನು ಒಳಗೊಂಡ ಕಾರ್ಯಕಾರಿ ಸಮಿತಿಯು ವೀರಶೈವ–ಲಿಂಗಾಯತ ಸಮಾಜದ ಶ್ರೇಯೋಭಿವೃದ್ಧಿಗೆ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಸಮಿತಿಯಿಂದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಕಾರ್ಯಕ್ರಮವನ್ನು ಟ್ರಸ್ಟ್‌ನ ನಿರ್ದೇಶಕರುಗಳಾದ ಶ್ರೀ ಹೆಚ್.ಪಿ. ದೇವಪ್ಪ, ಶ್ರೀ ಜಿ. ಸಿದ್ಧಪ್ಪ ಸ್ವಾಮಿ, ಶ್ರೀ ಹೆಚ್.ಪಿ. ಶ್ರೀಕಂಠಮೂರ್ತಿ ಶ್ರೀ ಡಿ. ಲೋಹಿತ್, ಶ್ರೀ ಎಂ. ಮಹೇಶ್, ಶ್ರೀ ಎನ್. ಮಹೇಶ್, ಶ್ರೀ ಟಿ.ಜಿ. ನಾಗೇಂದ್ರ ಶ್ರೀ ಡಿ.ಜಿ. ನಾಗೇಂದ್ರ ಪ್ರಸಾದ್ ಮತ್ತು ಶ್ರೀ ವಿ. ಪ್ರಭುಸ್ವಾಮಿಯವರುಗಳು ನಡೆಸಿಕೊಡಲಿದ್ದಾರೆ.